# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಲೋ/ಸಿಬ್ಬಂದಿ-3/01/ನೇನೇ/ಸಿಸಿಟಿ/2022-23

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 21/01/2025.

## ಸೂಚನಾ ಪತ್ರ

ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಅಧಿಸೂಚನೆ ಸಂಖ್ಯೆ:ಕಲೋ/ಸಿಬ್ಬಂದಿ-03/01/ನೇನೇ/ಸಿಸಿಟಿ/2022-23 ದಿನಾಂಕ:25/10/2024ರಲ್ಲಿ ಉಳಿಕೆ ಮೂಲ ವೃಂದದ 16 ಕ್ಲರ್ಕ್-ಕಂ-ಟೈಪಿಸ್ಟ್ ಹುದ್ದೆಗೆ ನೀವು ಆನ್-ಲೈನ್ ಮುಖಾಂತರ ಸಲ್ಲಿಸಿದ್ದ ಅರ್ಜಿಯಲ್ಲಿ ನಮೂದಿಸಲಾಗಿದ್ದ ಮಾಹಿತಿಗಳ ಆಧಾರದ ಮೇಲೆ ಮೂಲ ದಾಖಲಾತಿಗಳ ಪರಿಶೀಲನೆ ಮತ್ತು ಕೌಶಲ್ಯ ಅರ್ಹತಾ ಪರೀಕ್ಷೆಗಾಗಿ ನಿಮ್ಮನ್ನು 1:10 ಅನುಪಾತದಲ್ಲಿ ಪರಿಗಣಿಸಲಾಗಿದೆ. ಆದ್ದರಿಂದ, ಕೆಳಕಂಡ ಮೂಲ ದಾಖಲಾತಿಗಳ ಮತ್ತು ಅವುಗಳ ಸ್ವಯಂ ದೃಢೀಕೃತ ಒಂದು ಜೆರಾಕ್ಸ್ ಪ್ರತಿಗಳೊಂದಿಗೆ ಪರಿಶೀಲನೆಗಾಗಿ ಹಾಗೂ ಕೌಶಲ್ಯ ಅರ್ಹತಾ ಪರೀಕ್ಷೆಗಾಗಿ **ದಿನಾಂಕ:12/02/2025 ರಂದು ಬೆಳಿಗ್ಗೆ 9.00 ಗಂಟೆಗೆ ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು (ಆಧಾರ್/ಶೈಕ್ಷಣಿಕ/ಚುನಾವಣಾ ಗುರುತಿನ ಚೀಟಿ ಸಹಿತ) ಇಲ್ಲಿಗೆ** ತಪ್ಪದೇ ಹಾಜರಾಗಲು ಸೂಚಿಸಲಾಗಿದೆ.

ಈ ಸೂಚನಾ ಪತ್ರವನ್ನು ನೀವು ಪಡೆದ ಮಾತ್ರಕ್ಕೆ ನಿಮ್ಮನ್ನು ಈ ಸಂಸ್ಥೆಯು ಆಯ್ಕೆ ಮಾಡಿದೆ ಎಂದು ತಿಳಿಯಕೂಡದು. ನೀವು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ವಿದ್ಯಾರ್ಹತೆ, ಜನ್ಮ ದಿನಾಂಕ ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಪರಿಶೀಲನೆಗೊಳಪಟ್ಟಿರುತ್ತದೆ.

**ಹಾಜರು ಪಡಿಸಬೇಕಾದ ಮೂಲ ದಾಖಲಾತಿಗಳು:**

| | | |
|---|---|---|
| 1 | ವಿದ್ಯಾರ್ಹತೆ | 1. ಪದವಿ ಪೂರ್ವ ಶಿಕ್ಷಣ ಪರೀಕ್ಷೆ ಉತ್ತೀರ್ಣ ಅಥವಾ ತತ್ಸಮಾನ.<br>2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಕನ್ನಡ ಮತ್ತು ಆಂಗ್ಲ ಕಿರಿಯ ದರ್ಜೆ ಬೆರಳಚ್ಚು ಪರೀಕ್ಷೆ ಪಾಸು ಅಥವಾ ತತ್ಸಮಾನ. |
| 2. | ಜನ್ಮ ದಿನಾಂಕ | ಎಸ್.ಎಸ್.ಎಲ್.ಸಿ/ತತ್ಸಮಾನ ಅಂಕಪಟ್ಟಿ |
| 3. | ಜಾತಿ ಪ್ರಮಾಣ ಪತ್ರ | 1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ನಮೂನೆ-ಡಿ<br>2. ಪ್ರವರ್ಗ-1ರ ಅಭ್ಯರ್ಥಿಗಳು ನಮೂನೆ-ಇ<br>3. ಪ್ರವರ್ಗ-2ಎ, 2ಬಿ, 3ಎ ಮತ್ತು 3ಬಿ ಅಭ್ಯರ್ಥಿಗಳು ನಮೂನೆ-ಎಫ್‌ರಲ್ಲಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:29/11/2024ರಂದು ಚಾಲ್ತಿಯಲ್ಲಿರುವಂತೆ ಸಂಬಂಧಿತ ತಹಶೀಲ್ದಾರ್ ಅವರಿಂದ ಪಡೆದಿರಬೇಕು, ದಿನಾಂಕ: 29/11/2024ರ ನಂತರ ಪಡೆಯಲಾದ ಮೀಸಲಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. |
| 4. | ಮಾಜಿ ಸೈನಿಕ ಅಭ್ಯರ್ಥಿಗಳು | ಅಭ್ಯರ್ಥಿಯು ತಾನೇ ಮಾಜಿ ಸೈನಿಕನಾಗಿದ್ದಲ್ಲಿ ಬಿಡುಗಡೆ/ಮುಕ್ತಿ ಹೊಂದಿದ ಪ್ರಮಾಣ ಪತ್ರ |
| 5. | ಗ್ರಾಮೀಣ ಮೀಸಲಾತಿ | ಸಾಮಾನ್ಯ ವರ್ಗದಡಿ ಗ್ರಾಮೀಣ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ಮೇಲುಸ್ಥರಕ್ಕೆ (creamy layer) ಸೇರಿಲ್ಲವೆಂದು ದೃಢೀಕರಿಸುವ ಪ್ರಮಾಣ ಪತ್ರ ಅನುಬಂಧ-1)ನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ್ದ ಕೊನೆಯ ದಿನಾಂಕ: 29/11/2024ರಂದು ಚಾಲ್ತಿಯಲ್ಲಿರುವಂತೆ ತಹಶೀಲ್ದಾರರವರಿಂದ ಪಡೆದಿರತಕ್ಕದ್ದು. |

**ಪು.ತಿ.ನೋ**

| | | |
|---|---|---|
| 6. | ಗ್ರಾಮೀಣ ಅಭ್ಯರ್ಥಿ | 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಪ್ರಮಾಣ ಪತ್ರವನ್ನು ನಮೂನೆ-2ರಲ್ಲಿ ಶಾಲೆಯ ಮುಖ್ಯೋಪಾಧ್ಯಾಯರ ಸಹಿಯೊಂದಿಗೆ ವಲಯ ಶಿಕ್ಷಣಾಧಿಕಾರಿಯವರಿಂದ ಮೇಲು ರುಜು ಮಾಡಿಸಿರತಕ್ಕದ್ದು. |
| 7. | ಅಂಗವಿಕಲ ಮೀಸಲಾತಿ | 1. ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೇನೆನಿ 2005, ದಿನಾಂಕ:19/11/2005ರಲ್ಲಿ ತೋರಿಸಿರುವ ನಮೂನೆಯಲ್ಲಿ ಮೂರು ವೈದ್ಯಾಧಿಕಾರಿಗಳ ಸಹಿಯಿರುವ, ವೈದ್ಯಕೀಯ ಅಧೀಕ್ಷಕರವರಿಂದ ಸಹಿ, ಸೀಲು ಮತ್ತು ಮೇಲು ರುಜು ಪಡೆದ ಅಂಗವಿಕಲ ಪ್ರಮಾಣ ಪತ್ರ.<br>2. ಗುರುತಿನ ಚೀಟಿ ಮತ್ತು ಇತರೆ ನಮೂನೆಗಳಲ್ಲಿ ಸಲ್ಲಿಸಲ್ಪಟ್ಟ ಪ್ರಮಾಣ ಪತ್ರ ಪರಿಗಣಿಸಲು ಅವಕಾಶವಿರುವುದಿಲ್ಲ. |
| 8. | ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನಾ ಸಮಯದಲ್ಲಿ ಹಾಜರುಪಡಿಸುವ ಎಲ್ಲಾ ಪ್ರಮಾಣ ಪತ್ರಗಳನ್ನು ಆನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:29/11/2024ರೊಳಗೆ ಪಡೆದಿರುವ ದಾಖಲಾತಿಗಳನ್ನು ಮಾತ್ರ ಸಲ್ಲಿಸತಕ್ಕದ್ದು. ನಂತರದ ದಿನಾಂಕದ ದಾಖಲಾತಿಗಳನ್ನು ಪರಿಗಣಿಸಲಾಗುವುದಿಲ್ಲ. | |

**ಷರತ್ತುಗಳು:**

1. ಈ ಮೇಲಿನ ಮೂಲ ದಾಖಲಾತಿಗಳೊಂದಿಗೆ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಬೇಕು.
2. ಅಭ್ಯರ್ಥಿಗಳು ಆನ್-ಲೈನ್ ಅರ್ಜಿಯಲ್ಲಿ ನಮೂದಿಸಿರುವ ಮೀಸಲಾತಿಗಳಿಗೆ ಸಂಬಂಧಿಸಿದ ಎಲ್ಲಾ ಮೂಲ ಪ್ರಮಾಣ ಪತ್ರಗಳನ್ನು ತರಬೇಕು.
3. ಅಭ್ಯರ್ಥಿಗಳು ಈಗಾಗಲೇ ಮೀಸಲಾತಿಯನ್ನು ಆನ್-ಲೈನ್ ಅರ್ಜಿಯಲ್ಲಿ ಕೋರಿದ್ದಲ್ಲಿ ಮಾತ್ರ ಮೀಸಲಾತಿಗೆ ಪರಿಗಣಿಸಲಾಗುವುದು.
4. ಪರಶೀಲನೆ/ಪರೀಕ್ಷೆಗೆ ಹಾಜರಾದ ಬಗ್ಗೆ ಯಾವುದೇ ಪ್ರಯಾಣ ಭತ್ಯೆ, ದಿನ ಭತ್ಯೆ ನೀಡಲಾಗುವುದಿಲ್ಲ.
5. ಈ ಹುದ್ದೆಗೆ ಆಯ್ಕೆ ಹೊಂದಲು ಇಚ್ಛೆ ಇಲ್ಲದಿದ್ದಲ್ಲಿ ಲಿಖಿತ ಮೂಲಕ ಕೂಡಲೇ ಈ ಸಂಸ್ಥೆಗೆ ತಿಳಿಸತಕ್ಕದ್ದು.
6. ವಿವಿಧ ಮೀಸಲಾತಿಗಳನ್ನು ಕೋರುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಮತ್ತು ನಿಗಧಿಪಡಿಸಿದ ನಮೂನೆಯಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು, ಇದಕ್ಕೆ ತಪ್ಪಿದ್ದಲ್ಲಿ ಅವರ ಮೀಸಲಾತಿಯನ್ನು ತಿರಸ್ಕರಿಸಲಾಗುವುದು.
7. ದಾಖಲಾತಿಗಳ ಪರಿಶೀಲನೆಗೆ ಹಾಜರಾದ ಅಭ್ಯರ್ಥಿಗಳು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಲು ವಿಫಲರಾದಲ್ಲಿ, ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ಮತ್ತೊಂದು ಅವಕಾಶ ನೀಡಲಾಗುವುದಿಲ್ಲ.
8. ದಾಖಲಾತಿಗಳ ಪರಿಶೀಲನೆಗೆ ಮತ್ತು ಕೌಶಲ್ಯ ಅರ್ಹತಾ ಪರೀಕ್ಷೆಗೆ ನಿಗಧಿತ ದಿನಾಂಕದಂದು ಹಾಜರಾಗದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ನೀಡಲಾಗುವುದಿಲ್ಲ.

ಪು.ತಿ.ನೋ

ಅಭ್ಯರ್ಥಿಗಳು ಸಲ್ಲಿಸುವ ದಾಖಲಾತಿಗಳು ನೈಜತೆಯ ಪರಿಶೀಲನೆಗೆ ಒಳಪಟ್ಟಿದ್ದು, ತಪ್ಪು ಮಾಹಿತಿ/ನಕಲಿ ದಾಖಲೆಗಳನ್ನು ಸಲ್ಲಿಸಿದ ಮಾಹಿತಿ ಸಂಬಂಧಪಟ್ಟ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಕ್ರಮಕೈಗೊಳ್ಳಲಾಗುವುದು.

ಸಹಿ/-
ನಿಬಂಧಕರು,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಗೆ:
ಈ ಸೂಚನಾ ಪತ್ರದೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿನ ಸಂಬಂಧಪಟ್ಟ ಅಭ್ಯರ್ಥಿಗಳಿಗೆ.


ವಿಶೇಷ ಸೂಚನೆ:

1. ಮೇಲ್ಕಂಡ ಸೂಚನಾ ಪತ್ರವನ್ನು ಇ-ಮೇಲ್ ಮುಖಾಂತರ ಸಂಬಂಧಪಟ್ಟ ಅಭ್ಯರ್ಥಿಗಳಿಗೆ ಕಳುಹಿಸಿದ್ದು, ಸದರಿ ಅಭ್ಯರ್ಥಿಗಳು ಇ-ಮೇಲ್ ಸ್ವೀಕರಿಸಿದ ಬಗ್ಗೆ ಈ ಮುಂದಿನ ಇ-ಮೇಲ್ ವಿಳಾಸಕ್ಕೆ (kla-dra1-ka@gov.in) ಕಡ್ಡಾಯವಾಗಿ ಸ್ವೀಕೃತಿಯನ್ನು ಕಳುಹಿಸುವುದು.

2. ಅಭ್ಯರ್ಥಿಗಳಿಗೆ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಕೌಶಲ್ಯ ಪರೀಕ್ಷೆಯನ್ನು ಗಣಕಯಂತ್ರದ (ಕಂಪ್ಯೂಟರ್) ಮೂಲಕ ಕೈಗೊಳ್ಳಲಾಗುತ್ತಿದ್ದು, ಕನ್ನಡ ಕೌಶಲ್ಯ ಪರೀಕ್ಷೆಗೆ ಸಂಬಂಧಪಟ್ಟ ಸಾಫ್ಟ್‌ವೇರ್ ಲಿಂಕ್ ಅನ್ನು ಸಿದ್ಧಪಡಿಸಿ ಅಭ್ಯರ್ಥಿಗಳ ಅಭ್ಯಾಸಕ್ಕಾಗಿ ಈ ಕೆಳಕಂಡಂತೆ ನೀಡಲಾಗಿದೆ. ಹಾಗೆಯೆ ಅಭ್ಯರ್ಥಿಗಳ ಅನುಕೂಲಕ್ಕಾಗಿ ಕನ್ನಡ ಬೆರಳಚ್ಚು ಕೀಲಿಮಣಿ ವಿನ್ಯಾಸವನ್ನು ಅನುಬಂಧ-2 ರೊಂದಿಗೆ ಲಗತ್ತಿಸಲಾಗಿದೆ.

**http://recruitmenthck.kar.nic.in/kannadatyping/typpractice.html**

# KANNADA KEY BOARD LAYOUT



# KEY COMBINATIONS

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಃ |
| A | A | e | rF; | U | Uf | Hyu | i | i} | > | o | o} | oO | am | a: |

| | | | | |
|---|---|---|---|---|
| ಕ | ಖ | ಗ | ಘ | ಙ |
| k | H | g | p=] | o+ |
| ಚ | ಛ | ▯ | ಝ | ಞ |
| c | v= | j | ru=u | e} |
| ಟ | ಠ | ಡ | ಢ | ಣ |
| t | r+ | d | d= | z |
| ತ | ಥ | ದ | ಧ | ನ |
| w | ,=+ | , | ,= | n |
| ಪ | ಫ | ಬ | ಭ | ಮ |
| p | p= | b | b= | vu |

| | | | | | | | | | | |
|---|---|---|---|---|---|---|---|---|---|---|
| ಯ | ರ | ಲ | ವ | ಶ | ಷ | ಸ | ಹ | ಳ | ಕ್ಷ | ಜ್ಞ |
| myu | r | l | v | q | p” | s | h | x | k” | E |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
| k | kf | 8 | 8; | ku | kuf | kI | k’ | k’; | k’I | k’uf | k’uf; | kO | km | k: |